ಹೃತಿಕನ ಮೇಲೆ, ವೆಂಕಟರಮಣಸ್ವಾಮಿಯ ಮೇಲೆ ಆಣೆ ಅಂದಳು. ಅದರ ಬೆನ್ನಲ್ಲೇ ಆಕೆ ಬಿಕ್ಕುತ್ತಿರುವ ಶಬ್ದ ಕೇಳಿ ಗಾಬರಿಯಾಯಿತು. 'ಪ್ಲೀಸ್ ಅಳಬೇಡ, ಬರ್‍ತೀನಿ' ಅಂದೆ. 'ನನ್ ಅಪ್ಪಾ ಇದ್ದಿದ್ರ...' ಮತ್ತೆ ಜೋರು ಅಳು. ಕಾಲ್ ಕಟ್. ಪಾಪ ಅನ್ನಿಸಿ ಹೇಗಾದರೂ ಮಾಡಿ ಇದೊಂದು ಸಲ ಅವಳ ಮನೆಗೆ ಹೋಗಿ ಬಂದುಬಿಡುವುದೆಂದುಕೊಂಡೆ. ಏನೆಂದಳು ಅವಳು ಕೊನೆಯಲ್ಲಿ? ಮತ್ತ್ಯಾಕೆ ಅವಳ ಮನೆಯಲ್ಲಿ ಹಾರ ಹಾಕಿದ ಫೋಟೊ ಕಾಣಲಿಲ್ಲ. ಮತ್ತೆ? ಮತ್ತದನ್ನು ಅಲ್ಲಿಗೇ ತುಂಡರಿಸಿ, ಮುಂದಿನ ನನ್ನ ನಡೆಗೆ ನಮ್ಮ ಅಪ್ಪ ಅಮ್ಮನನ್ನು ಹೇಗೆ ಒಪ್ಪಿಸುವುದು ಎಂದು ಯೋಚಿಸಹತ್ತಿದೆ.

ಇಷ್ಟು ವರ್ಷಗಳಲ್ಲಿ ಅಪ್ಪ ಅಮ್ಮ ಊರಿಗೆ ಹೋದಾಗೆಲ್ಲ ನಮ್ಮ ಮನೆಗೇ ಗೆಳತಿಯರು ಬಂದು ಮಲಗಿದ್ದಿದೆ. ಆದರೆ ಯಾವ ಕಾರಣಕ್ಕೂ ನನಗೆ ಯಾರ ಮನೆಯಲ್ಲಿರಲೂ ಈ ತನಕ ಬಿಟ್ಟೇ ಇಲ್ಲ. ಹೋಗಲಿ ಒಂದು ದಿನವೂ ಪಿಕ್ನಿಕ್, ಟ್ರಿಪ್ ಕಳಿಸಲಿಲ್ಲ. ಈಗ ಹೇಗಾದರೂ ಮಾಡಿ ಅವರನ್ನು ಒಪ್ಪಿಸಲೇಬೇಕು. ಸಂಜೆ ಅವರು ಹೊಸ್ತಿಲೊಳಗೆ ಕಾಲಿಡುತ್ತಿದ್ದಂತೆ, ಶಾಕಾಂಬರಿ ಫೋನಿನಲ್ಲಿ ಅತ್ತಿದ್ದನ್ನು ಹೇಳಿದೆ. ಆಗ ಅಯ್ಯೋ ಪಾಪ ಎಂದ ಅಮ್ಮ, 'ಟೂ ವ್ಹೀಲರ್ ತೆಗೆದುಕೊಂಡೇ ಹೋಗು ಹಂಗಿದ್ರ. ಬೆಳಗ್ಗೆ ಬೇಗ ಬರಲು ಅನುಕೂಲ ಆಗ್ತದ' ಎಂದುಬಿಟ್ಟರು.

ಅಮ್ಮ ನನಗೂ ಅವಳಿಗೂ ಬಿಸಿಬಿಸಿ ಚಪಾತಿ, ಪಲ್ಯ ಮಾಡಿ ಬುತ್ತಿ ಕಟ್ಟಿಕೊಟ್ಟು ಬೆಳಗ್ಗೆ ಆರಕ್ಕೆಲ್ಲ ಬಂದುಬಿಡಲು ಹೇಳಿದರು. ನನ್ನ ಕುದುರೆ ಮಬ್ಬುಗತ್ತಲಿನಲ್ಲಿ ಹುರುಪಿನಿಂದ ಓಡಹತ್ತಿತು. ಮಧ್ಯೆಮಧ್ಯೆ ಶಾಕ್ ಟ್ರೀಟ್‌ಮೆಂಟ್ ನೆನಪಾಗಿ ನಿಧಾನಿಸುತ್ತಿತ್ತು.

ಬೇಲೂರು ಇಂಡಸ್ಟ್ರೀಯಲ್ ಏರಿಯಾದಲ್ಲಿದ್ದ ಪ್ಲಾಸ್ಟಿಕ್ ಆಟಿಕೆ ತಯಾರಿಕೆಯ ಒಂದು ಸಣ್ಣ ಫ್ಯಾಕ್ಟರಿಯಲ್ಲಿ ಅಕೌಂಟಂಟ್ ಆಗಿದ್ದ ಶಾಕಾಂಬರಿಯ ಅಮ್ಮ ಬೆಳಗ್ಗೆಯೇ ಬೆಳಗಾವಿಗೆ ಹೊರಟುಹೋಗಿದ್ದರು. ಶಾಕಾಂಬರಿ ಕದ ತೆಗೆದಾಗ ಮನೆಯೆಲ್ಲ ಬಿರಂಜಿ ಅನ್ನದ ಘಮ ಹರಡಿತ್ತು. ಖುಷಿಯಿಂದ ಅಪ್ಪಿಕೊಳ್ಳಲು ಮುಂದೆ ಬಂದವಳ ಎದುರು, ಬುತ್ತಿಗಂಟನ್ನು ಅಡ್ಡಡ್ಡ ಹಿಡಿದೆ. ಸ್ಸಾರಿ ಸ್ಸಾರಿ ಎಂದು ಹಿಂದೆ ಸರಿದಳು. ತಟ್ಟೆ ಬಟ್ಟಲು ಚಾಪೆಗಳೊಂದಿಗೆ ಟೇರೇಸಿಗೆ ಕರೆದೊಯ್ದು ಬೆಳದಿಂಗಳೂಟಕ್ಕೆ ಸಜ್ಜು ಮಾಡಿದಳು. ಹಿಂದಿನ ದಿನವಷ್ಟೇ ಹುಣ್ಣಿಮೆ ಕಳೆದಿದ್ದರಿಂದ ಚಂದಿರ ಹೋಳುತೆಂಗಿನಕಾಯಿಯಂತೆಯೇ ಇದ್ದ. ಹಾಗಾಗಿ ಮಹಡಿ ಮೇಲೆ ಬಟರ್ ಪೇಪರ್ ಹಾಸಿದಂತಿತ್ತು. ಅಮ್ಮ ಮಾಡಿದ್ದ ಅಡುಗೆಯೇ ಆಗಿದ್ದರೂ ಡಬ್ಬಿಯ ಜಳಕ್ಕೆ ನೀರಿಳಿದು ಈಗ ಗಾಳಿಯೂ ಹೊಕ್ಕು ರುಚಿ ಹೆಚ್ಚಿಸಿಕೊಂಡಿತ್ತು. ಶಾಕಾಂಬರಿ ಒತ್ತಾಯ ಮಾಡಿ ಎರಡೆರಡು ಸಲ ಬಿರಂಜಿ ಅನ್ನ ಗೊಡ್ಡುಸಾರು ಬಡಿಸಿದಳು. ಅಕ್ಕಪಕ್ಕದ ಮನೆಯ ದೀಪಗಳು ಆರುತ್ತಿದ್ದಂತೆ ಓಣಿಯ ನಾಯಿಗಳು ಹೋ ಎಂದವು. ಕೆಳಗೆ ಹೋಗೋಣ? ಅಂದೆ. ಮೆಟ್ಟಿಲುಗಳನ್ನು ಇಳಿಯುವಾಗ ನಾಯಿಗಳು ಎಡೆಬಿಡದೇ ಊಳಿಡಹತ್ತಿದವು. ಇದ್ದಕ್ಕಿದ್ದಂತೆ ಜೋರಾಗಿ ಬಿಕ್ಕುತ್ತ ಅಲ್ಲೇ ಕುಳಿತುಬಿಟ್ಟಳು. ಗಾಬರಿ ಎನ್ನಿಸಿದರೂ ತೋರ್ಗೊಡದೆ ಸಮಾಧಾನಿಸಿದೆ, ಸುಮ್ಮನಾದಳು. ಸ್ವಲ್ಪ ಹೊತ್ತಿನ ನಂತರ ಹೊಟ್ಟೆಯೊಳಗಿನದನ್ನು ಹಂಚಿಕೊಳ್ಳಹತ್ತಿದರು. ಆಕಾಶವೆಲ್ಲ ಕಪ್ಪಿನಿಂದ ಗವ್‌ಗುಡುತ್ತಿತ್ತು. ಚಂದಿರ ಪ್ರಜ್ಞಾವಸ್ಥೆಯಲ್ಲಿ ಕೇಳಿಸಿಕೊಳ್ಳುತ್ತಿದ್ದ.

'ಆವತ್ತೂ ಹಿಂಗ ರಾತ್ರೀ ಆಗಿತ್ತು. ಅವರ್ ಓಣಿ ನಾಯಿಗಳೂ ಹಿಂಗ ಒಂದಳತೀಲೇ ಒದರ್‍ತಿದ್ವು. ನಮ್ಮನೀಯಿಂದ ಅವರ ಮನೀಗೆ ಅಂದ್ರ, ಟೋಲ್ ನಾಕಾದ ತನಕಾ ನಾನು ಒಬ್ಬಾಕಿನ ನಡ್ಕೊಂಡ್ ಹೋಗಿದ್ದೆ. ಬಾಗಲಾ ತಗದಾವ್ರು ನಮ್ ಅಮ್ಮಾನಿಗಿಂತ ಸ್ವಲ್ಪ ವಯಸ್ಸಿನ್ಯಾಗ ದೊಡ್ಡವರಿದ್ರು. ನನಗಿಂತ ಸ್ವಲ್ಪ ದೊಡ್ ದೊಡ್ ಇದ್ದ ಇಬ್ಬರು ಹುಡುಗೋರು ಒಂದ ಹುಡುಗಿ ಅವರ ಹಿಂದಿಂದ ಬಂದ್ರು. ನಮ್ ಅಪ್ಪಾ ನನಗ ಬೇಕು ಅಂದೆ ಅಳಕೋತ. ಆದ್ರ ಅವ್ರು ಮಾತಾಡದನ ಮುಂದಮುಂದ ಬಂದ್ರು ನಾ ಹಿಂದಿಂದ ಸರದು ನಿಂತೆ. ಗೇಟ್ ಹಾಕಿಬಿಟ್ರು. ನಮ್ಮಪ್ಪಾ ಮಾಡಿಮ್ಯಾಲಿನ ಕಿಡಕಿಯೊಳಗ